ಕರ್ನಾಟಕ ಹಾಗೂ ಮಹಾರಾಷ್ಟ್ರದ ನಾಯಿಗಳ ಮೇಲೆ ಈ ಪ್ರಯೋಗ ಮಾಡಿ ಯಶಸ್ವಿಯಾಗಿದ್ದೇನೆ" ಎಂದು ನಾಯಿ ತಜ್ಞನಂತೆ ತನ್ನ ವಾದ ಮಂಡಿಸಿದ. ಮೈ ಕೈಗೆ ಬಿದ್ದ ಹೊಡೆತಗಳು ಚುರುಚುರು ಎಂದು ಉರಿಯುತ್ತಿದ್ದವು. ಅಂತ ಗಂಭೀರ ಪರಿಸ್ಥಿತಿಯಲ್ಲೂ ನಾಯಿಶಾಸ್ತ್ರದ ಬಗ್ಗೆ ಆತ ಮಂಡಿಸಿದ ವ್ಯಾಖ್ಯಾನಗಳು ನನ್ನಲ್ಲಿ ನಗೆ ಉಕ್ಕಿಸಿದವು. ನನ್ನ ನಗುವನ್ನು ಕಂಡು, "ಇಲ್ಲ ಕಲೀಮ್ ನಾನು ಹೇಳ್ತಿರೋದು ತುಂಬಾ ಸೀರಿಯಸ್ಸಾಗಿ" ಎಂದು ಆತ ಹಟದಿಂದ ಹೇಳಿದ. "ಆಯಿತು ಗುರುವೇ, ಮುಂದೆ ನಾಯಿಗಳು ಬೆನ್ನಟ್ಟಿದಾಗ ನೀನು ಹೇಳಿದ್ದು ನೆನಪಿಟ್ಟುಕೊಂಡು ಉಗಿತೀನಿ. ಈಗ ನಡಿ" ಎಂದು ಬೈಕು ತಳ್ಳಿಕೊಂಡು ಮನೆಗೆ ಬಂದೆವು.

ಮತ್ತೊಮ್ಮೆ ಶಿವಮೊಗ್ಗದ ಗೋಣಿಗರ ಕೇರಿಯಲ್ಲಿ ರಾತ್ರಿ ಹೊತ್ತಿನಲ್ಲಿ ಬೈಕು ಓಡಿಸಿಕೊಂಡು ಬರುತ್ತಿದ್ದೆ. ಹಿಂದೆ ಯಥಾ ಪ್ರಕಾರ ನಾಯಿಗಳ ಮಾನಸಿಕ ತಜ್ಞ ನೂರ್ ಕೂತಿದ್ದ. ಆ ಬೀದಿಯಲ್ಲಿ ರಾಶಿ ಮಟನ್ ಚಿಕನ್ ಅಂಗಡಿಗಳಿದ್ದಾವೆ. ಅಲ್ಲಿ ಎಸೆಯುವ ಮೂಳೆ, ವೇಸ್ಟ್ ಮಾಂಸ ತಿಂದ ಅಲ್ಲಿನ ನಾಯಿಗಳು ಹುಲಿ ಸಿಂಹದಂತೆ ಪೊಗದಸ್ತಾಗಿ ಬೆಳೆದಿವೆ. ಕತ್ತಲಲ್ಲಿ ಸಿಡಿಲಿನಂತೆ ಹಾರಿ ಬಂದ ಎರಡು ನಾಯಿಗಳು ನಮ್ಮ ಬೈಕಿನ ಬೆನ್ನು ಹತ್ತಿದವು. ಹಿಂದೆ ಕೂತಿದ್ದ ನೂರ್ ತನ್ನ ನಾಯಿಮಂತ್ರ ಬಳಸಿ ಅವುಗಳಿಗೆ 'ಹ್ಯಾಕ್ ಥೂ' ಉಗಿದ. ಇವನ ಈ ತುಪ್ಪುವಿಕೆಯಿಂದ ಕೆರಳಿದ ಆ ನಾಯಿಗಳು ಮತ್ತಷ್ಟು ಆವೇಶದಿಂದ ಬೆನ್ನಟ್ಟಿದ್ದವು. ನಾನೆಷ್ಟು ವೇಗವಾಗಿ ಓಡಿಸಿದರೂ ಬಿಡದೆ ಮೈಲುಗಟ್ಟಲೆ ಅಟ್ಟಿಸಿಕೊಂಡು ಬಂದವು. ಯಾವ ಮಂತ್ರ ಜಪಿಸಿದರೂ ಬಿಡಲೇ ಇಲ್ಲ. ಅವುಗಳ ಕೈಯಿಂದ ಜೀವ ಉಳಿಸಿಕೊಂಡು ಬಂದಿದ್ದೇ ಒಂದು ಸಾಹಸವೆನಿಸಿತು. ನಾಯಿಗಳು ಒಂದು ಹಂತದ ತನಕ ಬೆರೆಸಿಕೊಂಡು ಬಂದು ಸುಮ್ಮನಾಗುವ ಶ್ವಾನಗಳ ಕಂಡಿದ್ದ ನನಗೆ ಅವತ್ತು ಆ ನಾಯಿಗಳ ಆವೇಶ ತೀರಾ ವಿಚಿತ್ರ ಎನಿಸಿತು. "ಎಲ್ಲಪ್ಪ ನಿನ್ನ ಮಂತ್ರ ಕೆಲಸ ಮಾಡಲಿಲ್ಲವಲ್ಲ" ಎಂದು ಅವನನ್ನು ಹಂಗಿಸಿದೆ. ಅದಕ್ಕವನು ತನ್ನ ಪಟ್ಟು ಬಿಡದೆ, "ಪ್ರಾಯಶಃ ಅವು ವಿದೇಶಿ ತಳಿಗಳಿರಬೇಕು. ಹೀಗಾಗಿ ಅವುಗಳಿಗೆ ನಮ್ಮ ಭಾಷೆ ಅರ್ಥವಾಗಿಲ್ಲ" ಎಂದು ಹೊಸ ಸಬೂಬನ್ನು ಹೇಳಿದ.

**ಭದ್ರಾ ಡ್ಯಾಮಿಗೆ ಹೋಗಿ ಭಾರಿ ಗಾತ್ರದ ಎರಡು ಮೀನುಗಳನ್ನು ತಂದು ಪದ್ಮಕ್ಕನಿಗೆ ಕೊಟ್ಟು ಸಾರು ಮಾಡಲು ಹೇಳಿದೆವು. ಗಂಡನ ಜೊತೆ ದಿನವೂ ಗಾರೆ ಕೆಲಸಕ್ಕೆ ಹೋಗುತ್ತಿದ್ದ ಪದ್ಮಕ್ಕ, 'ನಾನು ಸಾರು, ಅನ್ನ ಮಾಡಿಟ್ಟು ಹೋಗಿರ್ತೀನಿ. ನೀವಿಬ್ಬರು ಮಧ್ಯಾಹ್ನ ಬಂದು ತಿನ್ನಿ. ಮನೆ ಬೀಗ ಕಿಟಕೀಲಿ ಇಟ್ಟಿರ್ತೀನಿ' ಎಂದು ಹೇಳಿದರು...**

ಮಲ್ಲಿಕಾರ್ಜುನ ಕಬ್ಬೂರು ಮತ್ತು ನಾನು ಎಂ.ಎ. ಓದುವಾಗ ಒಂದೇ ರೂಮಿನಲ್ಲಿ ವಾಸವಾಗಿದ್ದೆವು. ನಮಗೆ ರೂಮು ಬಾಡಿಗೆಗೆ ಕೊಟ್ಟಿದ್ದ ಓನರ್ ಪದ್ಮಕ್ಕ ನಮ್ಮ ಪಕ್ಕದ ಮನೆಯಲ್ಲೇ ವಾಸವಿದ್ದರು. ಭದ್ರಾ ಡ್ಯಾಮಿನಲ್ಲಿ ಹಿಡಿಯುವ ತಾಜಾ ಮೀನುಗಳು ಮಾರಾಟಕ್ಕೆ